ರೇಣುಕಾ ಷುಗರ್ ಫ್ಯಾಕ್ಟರಿ ಕೂಡ ಬಂದಿದೆ. ಜನರ ಆರೋಗ್ಯದ ಸಲುವಾಗಿ ಅಲ್ಲಿ ಯಾವುದೇ ಅನುಕೂಲತೆಗಳು ಇಲ್ಲ. ಆದರೆ ಅಲ್ಲಿ ಒಂದು ಆಸ್ಪತ್ರೆ ಅವಶ್ಯಕತೆ ಇದೆ. ಅವರು ತಮ್ಮ ಉತ್ತರದಲ್ಲಿ ಪ್ರಸ್ತಾವನೆ ಬಂದಿಲ್ಲವೆಂದು ಹೇಳುತ್ತಾರೆ. ನಾನು ಆ ಭಾಗದ ಶಾಸಕನಾಗಿ ಈ ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿ ಒಂದು ಆಸ್ಪತ್ರೆಯ ಅವಶ್ಯಕತೆ ಇದೆ, ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಫತ್ತರಗಾ ಗ್ರಾಮದಲ್ಲಿ ಜಾತ್ರೆ ನಡೆಯುತ್ತದೆ. ಆ ಸಂದರ್ಭದಲ್ಲಿ ಡಾಕ್ಟರ್ ವ್ಯವಸ್ಥೆಯನ್ನು ಜಾತ್ರೆ ದಿವಸ ಮಾಡಬಹುದು. ಮತ್ತು ನಮ್ಮ ಸರ್ಕಾರದ ಆದೇಶದ ಪ್ರಕಾರ ಗ್ರಾಮ ಪಂಚಾಯತಿ 4 ಎಕರೆ ಜಮೀನು ಒಂದು ಲಕ್ಷಗಳ ಅನುದಾನವನ್ನು ಕೊಡಬೇಕಾಗುತ್ತದೆ. ಅದನ್ನು ಒದಗಿಸಿದರೆ ಅಲ್ಲಿ ಆಸ್ಪತ್ರೆಯನ್ನು ತೆಗೆಯುವುದಕ್ಕೆ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವೈ. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಜಾತ್ರೆಯ ದಿವಸ ಅಷ್ಟೇ ಅಲ್ಲ, ಅಲ್ಲಿ ದಿನಾಲೂ ಸಾವಿರಾರು ಸಂಖ್ಯೆಯಲ್ಲಿ ಜನ ಬರುತ್ತಾರೆ. 4 ಎಕರೆ ಜಮೀನು ಒಂದು ಲಕ್ಷ ರೂ.ಗಳ contribution ಅನ್ನು ಗ್ರಾಮ ಪಂಚಾಯಿತಿಯಿಂದ ಒದಗಿಸುತ್ತೇವೆಂದು ಮಾನ್ಯ ಸಚಿವರಿಗೆ ನಾನು ಭರವಸೆ ಕೊಡುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಮಾಡುತ್ತೇವೆ.

ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವುದು

131 (1019) ಶ್ರೀ ಕೆ.ಎಸ್. ಕಿರಣ್ ಕುಮಾರ್ (ಕಳ್ಳಂಬೆಳ್ಳ) :– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಹುಳಿಯಾರು ಹೋಬಳಿ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

(ಅ) ಪ್ರಸ್ತಾವನೆ ಬಂದಿರುತ್ತದೆ.

(ಆ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕಿರಣ್‌ಕುಮಾರ್ ಕೆ.ಎಸ್. :– ಮಾನ್ಯ ಉಪಾಧ್ಯಕ್ಷರೆ, ಹುಳಿಯಾರು ಹೋಬಳಿ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ಎಂದು ಕೇಳಿದರೆ ಅದಕ್ಕೆ ಉತ್ತರವಾಗಿ ಪ್ರಸ್ತಾವನೆ ಬಂದಿರುತ್ತದೆಂದು ಹೇಳಿರುತ್ತಾರೆ. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನೆಂದು ಕೇಳಿದರೆ ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಅದೊಂದು ಗ್ರಾಮೀಣ ಪ್ರದೇಶ ತಮಗೂ ಗೊತ್ತಿರಬಹುದು ಈ ಹುಳಿಯಾರು ಗ್ರಾಮ ಒಂದು ತಾಲ್ಲೂಕು ಆಗುತ್ತಿರುವ ಪ್ರದೇಶ, ಆಗಬೇಕಾಗಿತ್ತು ಅದು ಇನ್ನುವರೆಗೆ ಆಗಿಲ್ಲ. ಆದ್ದರಿಂದ ಅಂತಹ ಒಂದು ಪ್ರದೇಶದಲ್ಲಿ 15 ಹಾಸಿಗೆಗಳ ಆಸ್ಪತ್ರೆ ಅಲ್ಲಿ ಇನ್ನುವರೆಗೆ ಇಲ್ಲದಿರುವುದರಿಂದ ನಿಜಕ್ಕೂ ಅಲ್ಲಿಯ ಬಡ ಜನತೆಗೆ ಬಹಳ ತೊಂದರೆಯಾಗಿದೆ. ಈಗಾಗಲೇ ಅಲ್ಲಿಗೆ ಒಂದು Lady Medicial Officer post section ಆಗಿದ್ದರೂ ಕೂಡ ಅಲ್ಲಿಗೆ posting ಮಾಡಿಲ್ಲ. ಅಂತಹ ಜಾಗದಲ್ಲಿ ಅದನ್ನು ಉನ್ನತೀಕರಿಸಿ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮಾಡಿದರೆ ನಿಜವಾಗಲೂ ನಾವು ಅಲ್ಲಿರುವ ಬಡ ಜನತೆಗೆ ಸಹಾಯ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇವರು ಮಾರ್ಗಸೂಚಿಯ ಪ್ರಕಾರವೆಂದು ಹೇಳದೇ, ಅಲ್ಲಿಯ ಅವಶ್ಯಕತೆಗೆ ಅನುಗುಣವಾಗಿ need base ಎಂದು ತೆಗೆದುಕೊಂಡು ಮಾಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಹುಳಿಯಾರು ಗ್ರಾಮದ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಈಗಾಗಲೇ ಮಾನ್ಯ ಶಾಸಕರು ನಮಗೆ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ. ನಾವು ಸಹ ಈ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ 2007–08ನೇ ಸಾಲಿಗೆ ಅದನ್ನು ಅಧಿಕಾರಿ ಸಮಿತಿಯ ಮುಂದೆ ಇಡುತ್ತಿದ್ದೇನೆ. ಅದನ್ನು ಅಪ್ರೂವಲ್ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಮತ್ತು ತಮ್ಮ ಅವಶ್ಯಕತೆಯನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.